## ಸಿವಿಲ್ ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹಗರಿಬೊಮ್ಮನಹಳ್ಳಿ

ಸಿ ಸಿ ನಂ. 479/2024

ಸಾಕ್ಷಿಗೆ ದಿನಾಂಕ 19-09-2025 ರಂದು ಪ್ರಮಾಣ ವಚನ ಭೋದಿಸಲಾಯಿತು.

C.W.: 1 P.W.: 1

| | | |
|---|---|---|
| ಹೆಸರು | ಃ | ಗೋಣೆಪ್ಪ |
| ತಂದೆಯ ಹೆಸರು | ಃ | ಪರಸಪ್ಪ |
| ವಯಸ್ಸು | ಃ | 29 ವರ್ಷ |
| ಉದ್ಯೋಗ | ಃ | ವ್ಯವಸಾಯ |
| ವಾಸ ಸ್ಥಳ | ಃ | ನೆಲ್ಲುಕುದುರಿ ಗ್ರಾಮ |

ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-

1ನೇ ಆರೋಪಿ ನನ್ನ ತಂದೆಯ ಚಿಕ್ಕಪ್ಪ ಎಂದರೆ ನನಗೆ ಅಜ್ಜನಾಗಬೇಕು. 2ನೇ ಆರೋಪಿ 1ನೇ ಆರೋಪಿ ಹೆಂಡತಿ ನನಗೆ ಅಜ್ಜಿಯಾಗಬೇಕು, 3ನೇ ಆರೋಪಿ ನನಗೆ ಚಿಕ್ಕಪ್ಪ, 4ನೇ ಆರೋಪಿ ನನಗೆ ಮಾವನಾಗಬೇಕು, 5ನೇ ಆರೋಪಿ ಸಹಾ ನನಗೆ ಮಾವನಾಗಬೇಕು, ಚಾಸಾ-4 ನನ್ನ ತಮ್ಮ, ಚಾಸಾ-5 ನನ್ನ ತಾಯಿ, ಚಾಸಾ-6 ನನ್ನ ತಂದೆ, ಚಾಸಾ-7 ನನ್ನ ಮಾವನ ಮಗ, ಚಾಸಾ-8 ನನ್ನ ಮಾವ, ಚಾಸಾ-9 ನನ್ನ ಮಾವ.

ನಮ್ಮ ಮತ್ತು ಆರೋಪಿತರ ನಡುವೆ ಯಾವುದೇ ಗಲಾಟೆಯಾಗಿಲ್ಲ, ಅವರು ನನಗೆ ಯಾವುದೇ ರೀತಿಯಿಂದ ಹೊಡೆಬಡಿ ಮಾಡಿಲ್ಲ, ಅವಾಚ್ಯವಾಗಿ ಬೈದಿಲ್ಲ, ಯಾವುದೇ ರೀತಿಯಿಂದ ತೊಂದರೆ ಕೊಟ್ಟಿಲ್ಲ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದು ದೂರಾಗಿದ್ದು ಸಾಕ್ಷಿಯು ಅದರಲ್ಲಿ ತನ್ನ ಸಹಿ ಅಂತಾ ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು ನಿಪಿ-1 ಎಂದು ಮತ್ತು ಅದರ ಮೇಲಿರುವ ಸಹಿಯನ್ನು ನಿಪಿ-1ಎ ಎಂದು ಗುರುತಿಸಲಾಯಿತು. ಸದರಿ ದಾಖಲೆಯಲ್ಲಿ ಏನು ಬರೆದಿರುತ್ತಾರೆಂದು ನನಗೆ ಗೊತ್ತಿಲ್ಲ. ಸದರಿ ದಾಖಲೆಗೆ ನಾನು ಪೋಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ.

(ಸಹಾಯಕ ಸರ್ಕಾರಿ ಅಭಿಯೋಜಕರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ನೀಡಲು ಕೇಳಿಕೊಂಡಿದ್ದು ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಸ. ಸ. ಅಭಿಯೋಜಕರವರಿಂದಃ-

ದಿಃ 30-03-2024 ರಂದು ಬೆಳಿಗ್ಗೆ 9.15 ಗಂಟೆ ಸಮಯದಲ್ಲಿ ಚಾಸಾ-6 ರವರ ಅಜ್ಜಿಯ ಹೆಸರಿನಲ್ಲಿರುವ ಜಮೀನಿನಲ್ಲಿ ನಾನು ಮತ್ತು ಚಾಸಾ-4 ರವರು ಚಾಸಾ8 ರವರ

ಟ್ರಾಕ್ಟರನ್ನು ಚಾಸಾ-7 ರವರನ್ನು ಚಾಲಕನಾಗಿ ತೆಗೆದುಕೊಂಡು ಹೋಗಿ ಟ್ರೈಲರ್ ಹೊಡೆಯುತ್ತಿರುವಾಗ 1ನೇ ಆರೋಪಿ ಏಕಾಏಕಿ ಬಂದು ತನ್ನ ಹೊಲದಲ್ಲಿರುವ ಟೋಮಾಟೋ ಸಾಲುಗಳನ್ನು ಟ್ರಾಕ್ಟರಿನಿಂದ ಹೊಡೆದು ಮುರಿದಿರುತ್ತೀರಿ ಅಂತಾ ಹೇಳಿ ನನಗೆ ಮತ್ತು ಚಾಸಾ-4 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಮುಂದೆ ಹೋಗದಂತೆ ನಮಗೆ ಅಡ್ಡಗಟ್ಟಿ ನಿಲ್ಲಿಸಿ ಕೈಯಿಂದ ಮತ್ತು ಕಲ್ಲುಗಳಿಂದ ಹೊಡೆದಿರುತ್ತಾರೆಂದರೆ ಸರಿಯಲ್ಲ. ನಂತರ 3ನೇ ಆರೋಪಿತನು ನನಗೆ ಅವಾಚ್ಯವಾಗಿ ಬೈದು ಚಪ್ಪಲಿಯಿಂದ ಹೊಡೆದರೆಂದರೆ ಸರಿಯಲ್ಲ. ಚಾಸಾ-7 ರವರು ಸದರಿ ಜಗಳವನ್ನು ಬಿಡಿಸಿ ಕಳುಹಿಸಿದರು ಎಂದರೆ ಸರಿಯಲ್ಲ.

ದಿಃ 31-03-2024 ರಂದು ಬೆಳಿಗ್ಗೆ 9 ಗಂಟೆ ಸುಮಾರಿಗೆ ನನ್ನ ಕೆಲಸಕ್ಕೆ ಅಂತಾ ನಾನು ಹೆಚ್ ಬಿ ಹಳ್ಳಿಗೆ ಹೋಗುತ್ತಿರುವಾಗ 1 ಮತ್ತು 2 ನೇ ಆರೋಪಿತರು ಹಿಂದೆ ಆದ ಗಲಾಟೆಯ ಉದ್ದೇಶ ಇಟ್ಟುಕೊಂಡು ಅವಾಚ್ಯವಾಗಿ ನನಗೆ ಬೈದಿದ್ದು ಆ ಸಿಟ್ಟಿನಿಂದ ನಾನು ನೀವು ನನಗೆ ಜೀವತಿಂತೀರಾ ಅಂತಾ ಹಾಗೂ ಇದಕ್ಕೆಲ್ಲ 3 ರಿಂದ 5ನೇ ಆರೋಪಿತರು ಕುಮ್ಮಕ್ಕು ನೀಡುತ್ತಿದ್ದಾರೆ ನನಗೆ ಸಾಕಾಗಿ ಹೋಗಿದೆ ಎಂದು ನಮ್ಮ ಮನೆಯ ಮುಂದೆ ಇರುವ ರಸ್ತೆಯಲ್ಲಿ ಬೆಳಿಗ್ಗೆ 10.30 ಗಂಟೆ ಸುಮಾರಿಗೆ ನನ್ನ ಮೈಮೇಲೆ ಪೆಟ್ರೋಲ್ ಹಾಕಿಕೊಂಡು ಸುಟ್ಟುಕೊಂಡಿರುತ್ತೇನೆಂದರೆ ಸರಿಯಲ್ಲ. ಚಾಸಾ-5 ರಿಂದ 9 ರವರು ಬೆಂಕಿಯನ್ನು ನಂದಿಸಿ ನನಗೆ ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಿದರೆಂದರೆ ಸರಿಯಲ್ಲ. ಇದಕ್ಕೆಲ್ಲಾ ಕಾರಣ 1 ರಿಂದ 5ನೇ ಆರೋಪಿತರೇ ಎಂದರೆ ಸರಿಯಲ್ಲ. ಘಟನೆಯ ವಿಚಾರವಾಗಿ ನಾನು ನಿಪಿ-1 ರಂತೆ ಪೋಲೀಸ್ ಠಾಣೆಯಲ್ಲಿ ದೂರು ನೀಡಿರುತ್ತೇನೆಂದರೆ ಸರಿಯಲ್ಲ. ನಾನು ಆರೋಪಿತರೊಂದಿಗೆ ರಾಜೀಯಾಗಿದ್ದೇನೆಂದರೆ ಸರಿ. ಆ ಕಾರಣದಿಂದಾಗಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

<u>ಪಾಟೀ ಸವಾಲು. ಆರೋಪಿ ಪರ ವಕೀಲರಿಂದಃ- ಇಲ್ಲ</u>

ಮರು ವಿಚಾರಣೆ ಇಲ್ಲಃ

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ,

ಸಿವಿಲ್ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ